# ಎನ್‌ಐಟಿಕೆ: ಸುರಕ್ಷೆ ಕಾರ್ಯಾಗಾರ



**ಸುರತ್ಕಲ್, ಮಾ. 13:** ಎನ್‌ಐಟಿಕೆ ಸುರತ್ಕಲ್‌ನಲ್ಲಿ ಗಣಿಗಾರಿಕೆ ವಿಭಾಗದ ವತಿಯಿಂದ ಡೇಟಾ ಸುರಕ್ಷೆ, ಪ್ರಮುಖ ಕೈಗಾರಿಕೆಗಳಲ್ಲಿ ಅಪ್ಲಿಕೇಶನ್ ಪಾತ್ರಗಳು ಕುರಿತು ಕಾರ್ಯಾಗಾರ ಜರಗಿತು.

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ವಿಜ್ಞಾನ, ಎಂಜಿನಿಯರಿಂಗ್ ಸಂಶೋಧನ ಮಂಡಳಿ ಆಯೋಜಿಸಿದ್ದು, ಒಂದು ವಾರ ಕಾಲ ನಡೆಯಿತು. ಕರ್ನಾಟಕ, ಆಂಧ್ರ, ತೆಲಂಗಾಣದ 25ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದರು. ದೃಶ್ಯ ಕಲೆಹಾಕುವಿಕೆ, ಗಣಿಗಾರಿಕೆ ಯಂತಹ ಕೆಲಸಗಳಲ್ಲಿ ಸುರಕ್ಷೆಗೆ ಆದ್ಯತೆ ನೀಡುವ ಸಲುವಾಗಿ ಡೇಟಾ ಸಂಗ್ರಹ ಮತ್ತಿತರ ವಿಚಾರಗಳಲ್ಲಿ ಅಧ್ಯಯನ, ಪ್ರಬಂಧ ಮಂಡನೆ, ವಿಚಾರ ಸಂಕಿರಣ ನಡೆಯಿತು. ಎನ್‌ಐಟಿಕೆಯ ಆರ್‌ಸಿ ಡೀನ್ ಪ್ರೊ| ಉದಯ್ ಭಟ್, ಐಐಟಿ ಖರಗ್‌ಪುರದ ಪ್ರೊ| ಝುರೇಶ್ವರ್ ಮೈತಿ, ಎನ್‌ಐಟಿಕೆಯ ಗಣಿಗಾರಿಕೆ ಅಧ್ಯಯನ ವಿಭಾಗದ ಡೀನ್ ಪ್ರೊ| ಹರ್ಷವರ್ಧನ್, ಸಹಾಯಕ ಪ್ರಾಧ್ಯಾಪಕ ಡಾ| ಬಿ.ಎಂ. ಕುನಾರ್ ಮತ್ತಿತರರು ಉಪಸ್ಥಿತರಿದ್ದರು.

Udayavani, Date:14/03/2024, p. no - 04